(ಬಿ) ಶಿಡ್ಲಘಟ್ಟ ತಾಲ್ಲೂಕು ತಿಪ್ಪೇನಹಳ್ಳಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ವಿಟಮಿನ್ ''ಎ'' ನೀಡಿದ್ದರಿಂದ ಮಕ್ಕಳು ಅಸ್ವಸ್ಥರಾಗಿರುವುದರ ಕುರಿತು.

+ ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಅನಿರೀಕ್ಷಿತವಾದಂಥ ಒಂದು ಘಟನೆ ನಡೆದಿದೆ. ಬಹುಶಃ ತಾವೂ ಕೂಡ ಇವತ್ತಿನ ಪತ್ರಿಕೆಯಲ್ಲಿ ಓದಿರಬಹುದೆಂದು ತೋರುತ್ತದೆ. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯಿಂದ ಬಂದಿರತಕ್ಕಂಥ ವಿಟಮಿನ್'ಎ' ಲಿಕ್ವಿಡ್ ಔಷಧಿಯನ್ನು ಮಕ್ಕಳ ಕಣ್ಣಿನ ದೃಷ್ಟಿವೃದ್ಧಿಸಲು ಮಕ್ಕಳಿಗೆ ಕೊಡಬೇಕೆಂದು ಹೇಳಿ, ತಿಪ್ಪೇನಹಳ್ಳಿ ಎನ್ನತಕ್ಕಂಥ ಒಂದು ಗ್ರಾಮದಲ್ಲಿ ಅಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಎನ್ಎಂ ನವರು ಮತ್ತು ಉಪಾಧ್ಯಾಯರು ಸೇರಿ ಅಲ್ಲಿಯ ಮಕ್ಕಳಿಗೆ ವಿತರಣೆ ಮಾಡಿದ್ದಾರೆ. ಆ ಔಷಧಿಯನ್ನು ನಿನ್ನೆ ಸುಮಾರು 2 ಗಂಟೆಯಲ್ಲಿ ಸಂಬಂಧಪಟ್ಟಂಥ ಶಾಲೆಯಲ್ಲಿ ಇರತಕ್ಕಂಥ ಉಪಾಧ್ಯಾಯರೇ ಒತ್ತಾಯಪೂರ್ವಕವಾಗಿ ಆ ಮಕ್ಕಳಿಗೆ ಎಷ್ಟು ವಿಟಮಿನ್ 'ಎ' ಟಾನಿಕ್ ಕೊಡಬೇಕಾಗಿತ್ತೋ ಅದಕ್ಕಿಂತ ಹೆಚ್ಚಿಗೆ ಕೊಟ್ಟಿದ್ದರಿಂದ ಒಂದು ಕೊಠಡಿಯಲ್ಲಿ ಇದ್ದಂಥ ಸುಮಾರು 30 ಜನ ಮಕ್ಕಳು ಅಸ್ವಸ್ಥರಾಗಿದ್ದಾರೆ. ಅದೃಷ್ಟವಶಾತ್ ಅಲ್ಲಿ ಒಂದು ವೆಹಿಕಲ್ ಬಂದಿದ್ದರಿಂದ ಅಲ್ಲಿ ಅಸ್ವಸ್ಥರಾದ ಮಕ್ಕಳನ್ನು ಸಾಗಿಸುವುದಕ್ಕೆ ಸಾಧ್ಯವಾಯಿತು. ಆರೋಗ್ಯ ಇಲಾಖೆ ಅಧಿಕಾರಿಗಳು ಬಂದು ಅವರಿಗೆ ಪ್ರಥಮ ಚಿಕಿತ್ಸೆ ಮಾಡಿದ್ದರಿಂದ ಆ ಮಕ್ಕಳು ಸುಧಾರಿಸಿಕೊಂಡಿದ್ದಾರೆ. 10 ಜನ ಮಕ್ಕಳು ಒಳರೋಗಿಗಳಾಗಿ ಆಸ್ಪತ್ರೆಯಲ್ಲಿ ಇದ್ದಾರೆ. ಬಹುಶಃ ಈ ವಿಟಮಿನ್ 'ಎ' ಎನ್ನತಕ್ಕಂಥ ಔಷಧಿಯನ್ನು 11 ತಿಂಗಳಿಂದ 3 ವರ್ಷದವರೆಗೆ ಇರತಕ್ಕಂಥ ಮಕ್ಕಳಿಗೆ ಮಾತ್ರ ಕಣ್ಣಿನ ದೃಷ್ಟಿಯನ್ನು ವೃದ್ಧಿ ಮಾಡುವುದಕ್ಕೆ ಕೊಡಬೇಕಾದಂಥ ಟಾನಿಕ್ ಅದು ಆಗಿದೆ. ದುರಾದೃಷ್ಟವಶಾತ್ ಇದನ್ನು ಸುಮಾರು 9ರಿಂದ 12 ವರ್ಷದ ಮಕ್ಕಳಿಗೆ ಇಡೀ ಪ್ರಾಥಮಿಕ ಶಾಲೆಯಲ್ಲಿ ಕೊಟ್ಟುಬಿಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಆಗಬೇಕು....

ಅಧ್ಯಕ್ಷರು: ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ....ನಾನೂ ಸಹ ಆ ವಿಚಾರದ ಬಗ್ಗೆ ಪೇಪರ್‌ನಲ್ಲಿ ಓದಿದ್ದೇನೆ ಮಾನ್ಯ ಮುನಿಯಪ್ಪನವರೇ. ಅದನ್ನು ಹೇಳಬೇಕಾಗಿರುವ ವಿಧಾನ ಹೇಗೆಂದರೆ - ಎಕ್ಸ್‌ಪೈರಿ ಡೇಟ್ ಆಗಿರತಕ್ಕಂಥ ಔಷಧಿಯನ್ನು ಕೊಟ್ಟಿದ್ದಾರೆ, ಅದರಿಂದಾಗಿ ಆಗಿರತಕ್ಕಂಥ ದುಷ್ಪರಿಣಾಮವನ್ನು ಹೇಳಬೇಕು. ವೃತ್ತಾಂತವನ್ನೆಲ್ಲಾ ಹೇಳಬೇಕಾಗಿಲ್ಲ. ಅನುಭವ ಅದರೂ ಕೂಡ ಹರಿಕಥೆ ಹೇಳುತ್ತಾ ಇದ್ದರೆ ನನಗೆ ಎಲ್ಲಿ ತಾಳ್ಮೆ ಇರಬೇಕು ಹೇಳಿ.

ಶ್ರೀ ವಿ.ಮುನಿಯಪ್ಪ:....ಆ ಔಷಧಿ ಎಕ್ಸ್‌ಪೈರಿ ಆಗಿದೆ. ಆದರೂ ಅದರ ಬಗ್ಗೆ ಯಾರೂ ಗಮನಿಸದೆ ಸಂಬಂಧಪಟ್ಟಂಥ ಆರೋಗ್ಯ ಇಲಾಖೆಯವರು ಮತ್ತು ಆ ಶಾಲೆಯ ಉಪಾಧ್ಯಾಯರು ಸೇರಿಕೊಂಡು ಈ ತರಹ ಮಾಡಿದ್ದಾರೆ. ಏನೋ

ಅದೃಷ್ಟವಶಾತ್ ಆ ಮಕ್ಕಳೆಲ್ಲಾ ಇವತ್ತು ಗುಣಮುಖರಾಗಿದ್ದಾರೆ. ನಾನು ನಿನ್ನೆ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿ ನೋಡಿದಾಗ ನಿಜವಾಗಿಯೂ ಆ ಮಕ್ಕಳು ಮತ್ತು ತಂದೆತಾಯಿಗಳ ಪರಿಸ್ಥಿತಿ ಬಹಳ ಕರುಣಾಜನಕವಾಗಿತ್ತು. ಇದಕ್ಕೆ ಸಂಬಂಧಪಟ್ಟವರು ಯಾರು ಇದ್ದಾರೆ ಅವರ ಮೇಲೆ ಸರ್ಕಾರ ತೀವ್ರ ತನಿಖೆ ಮಾಡಬೇಕು. ಈ ತರಹ ಅನಿರೀಕ್ಷಿತವಾದಂಥ, ಅಕ್ಷಮ್ಯವಾದ ಘಟನೆಗಳು ನಡೆದಂಥ ಅನೇಕ ಸಂದರ್ಭಗಳಲ್ಲಿ ಪ್ರಾಣವನ್ನೇ ಕಳೆದುಕೊಂಡಿರತಕ್ಕಂಥ ಅನೇಕ ಸಂದರ್ಭಗಳನ್ನು ನಾವು ಕಂಡಿದ್ದೇವೆ. ಇಲ್ಲಿ 30 ಶಾಲಾ ಮಕ್ಕಳು ಅದೃಷ್ಟವಶಾತ್ ಉಳಿದುಕೊಂಡಿದ್ದಾರೆ. ಇದು ಆರೋಗ್ಯ ಇಲಾಖೆ ಅಧಿಕಾರಿಗಳು ಬಂದ ತಕ್ಷಣ ಪ್ರಥಮ ಚಿಕಿತ್ಸೆ ಮಾಡಿದ್ದರಿಂದ ಅವರು ಉಳಿದುಕೊಂಡಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಎಎನ್ಎಂ ಮತ್ತು ಉಪಾಧ್ಯಯರು ಯಾರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಔಷಧಿ ಎಕ್ಸ್ಪೈರಿ ಆದರೂ ಕೂಡ ಅವರು ಅದನ್ನು....

ಅಧ್ಯಕ್ಷರು: ಪುನಃ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ. ಇದನ್ನು ಒಂದು ಸೆಂಟಿನ್ಸ್ನಲ್ಲಿ ಪರಿಣಾಮಕಾರಿಯಾಗಿ ಹೇಳಬಹುದು. ಏನು ಮಾತನಾಡಬೇಕು, ಹೇಗೆ ಮಾತನಾಡಬೇಕೆಂದು ನಾವು ಎಲ್ಲಿ ಬರೆದುಕೊಡುವುದಕ್ಕಾಗುತ್ತದೆ? ಈ ತರಹ ಆದರೆ ನನಗೆ ಸದನ ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎ. ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿರುವುದು ತಪ್ಪಾಗಿದೆಯೇ?

ಅಧ್ಯಕ್ಷರು: ಮಾತನಾಡಬೇಕು. ಮಾತನಾಡಬಾರದೆಂದು ಹೇಳುತ್ತಿಲ್ಲ, ಅದಕ್ಕೋಸ್ಕರವೇ ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟಿದ್ದುದು. ಇಡೀ ವಿಚಾರವನ್ನು ಒಂದೇ ವಾಕ್ಯದಲ್ಲಿ ಹೇಳಬಹುದಾಗಿತ್ತು.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಮಗೆ ಇಲ್ಲಿ ಸರಿಯಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಏನು ಮಾಡುವುದು ನಮ್ಮ ದುರಾದೃಷ್ಟ. ನಮಗೆ ಮಾತನಾಡುವುದಕ್ಕೆ ಬರುವುದು ಅಷ್ಟೆ.

ಅಧ್ಯಕ್ಷರು: ಅದಕ್ಕೆ ರೂಲ್ಸ್ ಅದರೂ ಓದಿಕೊಂಡು ಬರಬೇಕು. ರೂಲ್ಸ್ ಓದದೆಯೇ, ವಿಷಯವನ್ನು ಸಹ ತಿಳಿದುಕೊಳ್ಳದೆ ಇಲ್ಲಿಗೆ ಬಂದರೆ ಅಧ್ಯಕ್ಷರು ಏನು ಮಾಡಬೇಕು? ಅಧ್ಯಕ್ಷರು ಪಾಠ ಹೇಳಿಕೊಡುವುದಕ್ಕೆ ಆಗುತ್ತದೆಯೇ?

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 9 ತಿಂಗಳಿನಿಂದ 1 ವರ್ಷ, 1 ವರ್ಷದಿಂದ 3 ವರ್ಷದ ಅವಧಿಯ ಮಕ್ಕಳಿಗೆ 'ರಾತ್ರಿ ಕುರುಡು' ತಡೆಯಲಿಕ್ಕೆ ವಿಟಮಿನ್ 'ಎ' ಡ್ರಾಪ್ಸ್ನ್ನು ಕೊಡುತ್ತಾರೆ. 9

ತಿಂಗಳಿನಿಂದ 1 ವರ್ಷದ ಮಕ್ಕಳಿಗೆ 1 ಎಂ.ಎಲ್-ಅಂದರೆ ಸುಮಾರು ಒಂದು ಲಕ್ಷ ಇಂಟರ್‌ನ್ಯಾಷನಲ್ ಯೂನಿಟ್, ಒಂದು ವರ್ಷದಿಂದ 3 ವರ್ಷದ ಮಕ್ಕಳಿಗೆ 2 ಎಂ.ಎಲ್. ಅಂದರೆ 2 ಲಕ್ಷ ಇಂಟರ್‌ನ್ಯಾಷನಲ್ ಯೂನಿಟ್‌ನ್ನು ಕೊಡಬೇಕು. ಆನಂತರ ಆ ಔಷಧಿಯನ್ನು ಕೊಡಬೇಕಾದಂಥ ಅಗತ್ಯ ಇರಲಿಕ್ಕಿಲ್ಲ. ಕುರುಡುತನ ಇದ್ದರೆ ಆಗ ಕೊಡಬೇಕು. ಆ ಶಾಲೆಯಲ್ಲಿರತಕ್ಕಂಥ ಮಕ್ಕಳ ವಯಸ್ಸು 5 ವರ್ಷಕ್ಕೆ ಮೇಲ್ಪಟ್ಟಿರುವುದರಿಂದ ಎಎನ್‌ಎಂ ರವರು ಮತ್ತು ಶಾಲಾ ಶಿಕ್ಷಕರು ಆ ಮಕ್ಕಳಿಗೆ ಏಕೆ ಈ ಔಷಧಿಯನ್ನು ಕೊಟ್ಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಆದರೆ ಎಕ್ಸ್‌ಪೈರಿ ಆಗಿರತಕ್ಕಂಥ ಡ್ರಗ್ಸ್ ಏನೂ ಅಲ್ಲ. ಆ ಔಷಧಿ ಈ ತಿಂಗಳ 31ನೇ ತಾರೀಕಿಗೆ ಎಕ್ಸ್‌ಪೈರಿ ಆಗುತ್ತದೆ. ಖಾಲಿ ಹೊಟ್ಟೆಯಲ್ಲಿ ಹೆಚ್ಚು ಪ್ರಮಾಣದ ಔಷಧಿ ಸೇವನೆಯಿಂದಾಗಿ ಗಾಸ್ಟ್ರಿಕ್ ಇರಿಟೇಷನ್ ಆಗಿ ವಾಂತಿ ಆಗಿ ಆ ಮಕ್ಕಳು ಸ್ವಲ್ಪ ಅಸ್ವಸ್ಥರಾಗಿದ್ದಾರೆ. ಮತ್ತು ಈಗ ಸುಮಾರು 35 ಜನ ಮಕ್ಕಳಲ್ಲಿ ಎಲ್ಲರೂ ಕೂಡ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಮಯಕ್ಕೆ ಸರಿಯಾಗಿ ವೈದ್ಯರು ಬಂದು ಮಕ್ಕಳ ತಪಾಸಣೆಯನ್ನು ನಡೆಸಿ ಅವರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ನೋಡಿಕೊಂಡಿದ್ದಾರೆ. 'ಎ' ವಿಟಮಿನ್ ಆಯಿಲ್ ಸಸ್ಪೆನ್‌ಷನ್ ಆದ್ದರಿಂದ ಅದು ಏನೂ ವಿಷ ಆಗಿ ಪರಿವರ್ತನೆಯಾಗುವುದಿಲ್ಲ. ಅದು ಎಕ್ಸ್‌ಪೈರಿ ಆದರೆ ಅದರ ಪೋಟೆನ್ಸಿ ಕಡಿಮೆ ಆಗುತ್ತದೆಯೇ ವಿನಃ **It will not act as poison.** ಇನ್ನೊಂದು ವಿಚಾರ ಏನೆಂದರೆ, ಎಕ್ಸ್‌ಪೈರಿ ಆಗಿ 3 ತಿಂಗಳು ಆಗಿದ್ದರೂ ಕೂಡ ಅದರ ರೋಗನಿರೋಧಕ ಶಕ್ತಿ ಅದರಲ್ಲಿ ಇದ್ದೇ ಇರುತ್ತದೆ. ಆದರೆ ಶಾಲಾ ಮಕ್ಕಳಿಗೆ 5 ವರ್ಷದ ನಂತರ ಹೆಚ್ಚಿನ ಪ್ರಮಾಣದಲ್ಲಿ ಖಾಲಿ ಹೊಟ್ಟೆಯಲ್ಲಿ ಕೊಡತಕ್ಕಂಥದ್ದು ಸರಿಯಾದ ಕ್ರಮವಲ್ಲ. ಬೆಳಿಗ್ಗೆಯೇ ಪತ್ರಿಕೆಯ ನೋಟಿಫೀಕೇಷನ್ ನೋಡಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಉನ್ನತ ಅಧಿಕಾರಿಯವರನ್ನು ಅಲ್ಲಿಗೆ ಕಳುಹಿಸಿ ಆ ಎಎನ್‌ಎಂ ರವರನ್ನು ಸಸ್ಪೆಂಡ್ ಮಾಡಲಿಕ್ಕೆ ಸೂಚನೆ ಕೊಟ್ಟಿದ್ದೇನೆ. ಶಾಲಾ ಶಿಕ್ಷಕರ ಕರ್ತವ್ಯ ಲೋಪವಾಗಿದ್ದರೆ ಅದನ್ನು ತನಿಖೆ ಮಾಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡುತ್ತೇನೆ. ಮತ್ತು ಎಲ್ಲಾ ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅಧ್ಯಕ್ಷರು: ಸನ್ಮಾನ್ಯ ಸದಸ್ಯರಾದಂಥ ಮಾಧುಸ್ವಾಮಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ಅತ್ಯಂತ ನೋವಿನಿಂದ ಸಭೆಗೆ ತಿಳಿಸಬೇಕಾಗಿದೆ. ಸದಸ್ಯರು ಯಾರೂ ಸಹ ಈ ವಿಚಾರದಲ್ಲಿ ನನ್ನ ಜೊತೆಗೆ ಸಹಕರಿಸುತ್ತಿಲ್ಲ. ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಬಹಳ ಸಮಂಜಸವಾಗಿದೆ. ಒಬ್ಬ ಸದಸ್ಯರು ಶಿಸ್ತಿಗೆ ತಮ್ಮನ್ನು ತಾವೇ ಒಳಪಡಿಸಿಕೊಂಡು, ನಿಯಮಾನುಸಾರ ನಮಗೆ ನೋಟೀಸ್ ಕೊಟ್ಟು, ಆ ನೋಟೀಸ್ ಹಾಗೆಯೇ ಪೆಂಡಿಂಗ್ ಇದ್ದು, ಮತ್ತೆ ಇನ್ನೊಬ್ಬರು ಆ ವಿಚಾರವನ್ನು ಅದರ ಮೊದಲೇ ಪ್ರಸ್ತಾಪ ಮಾಡತಕ್ಕಂಥದ್ದು, ನಿಯಮಗಳನ್ನೆಲ್ಲಾ ಬಿಟ್ಟು ಎಲ್ಲ ವಿಚಾರದಲ್ಲೂ

ಎಲ್ಲರೂ ಪ್ರಸ್ತಾಪ ಮಾಡತಕ್ಕಂಥದ್ದು, ಚರ್ಚೆಯನ್ನು ಮಾಡತಕ್ಕಂಥದ್ದು, ಸರಿಯಲ್ಲ. ಹೀಗೆ ಮಾಡಿದರೆ ಸದನವನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ನನಗೆ ರೂಲ್ಸ್ ಪರಿಚಯ ಇಲ್ಲವೇನೋ ಎನ್ನತಕ್ಕಂಥ ಅಭಿಪ್ರಾಯ ಸದನದ ಕಲಾಪಗಳನ್ನು ವೀಕ್ಷಣೆ ಮಾಡತಕ್ಕಂಥ ಬೇರೆಯವರು ಯಾರಿಗಾದರೂ ಕೂಡ ಅನಿಸಬಹುದು. ಮತ್ತು ಶ್ರೀಮಾನ್ ಶಿವಪ್ಪನವರು ಕೂಡ ಕ್ರಿಯಾಲೋಪವನ್ನು ಎತ್ತಿದರು. ನಾನು ಇಷ್ಟೇ ಹೇಳುತ್ತೇನೆ-ಎಂದು ಪ್ರಮುಖ ವಿರೋಧ ಪಕ್ಷಗಳ ಮುಖಂಡರುಗಳು ಯಾರು ಇದ್ದಾರೆ ಅವರು ತಮ್ಮ ಸಚೇತಕರ ಮುಖಾಂತರ ಶೂನ್ಯ ವೇಳೆಯಲ್ಲಿ ಒಂದು ದಿವಸಕ್ಕೆ 3 ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ನಿಮ್ಮ ಸಚೇತಕರು ಅಥವಾ ತಾವು ಮುಖಂಡರೇ ಬರೆದು ಕಳುಹಿಸಿದರೆ ತಾವು ಯಾವುದು ಬರೆದು ಕಳುಹಿಸುತ್ತೀರೊ ಆ 3-3ನ್ನು ಪ್ರೈಯಾರಿಟಿ ಮೇಲೆ ಅವಕಾಶ ಕೊಡುತ್ತೇನೆ. ಶೂನ್ಯವೇಳೆಯಲ್ಲಿ ನಾಲ್ಕನೆಯ ವಿಚಾರಕ್ಕೆ ಪ್ರಸ್ತಾಪ ಮಾಡಲು ಯಾರಾದರೂ ನನ್ನ ಹತ್ತಿರ ಬಂದರೆ ನಾನು ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಆ ಮೇಲೆ ಇತರೆ ಫ್ಲೋರ್ ಲೀಡರ್ಸ್ ಇಂಡಿಪೆಂಡೆಂಟ್ಸ್ ಯಾರು ಇದ್ದಾರೆ ಅವರು ನೇರವಾಗಿ ನನ್ನ ಹತ್ತಿರ ಬಂದು ಸದನ ಪ್ರಾರಂಭವಾಗುವುದಕ್ಕೆ ಮೊದಲು ಶೂನ್ಯವೇಳೆಯಲ್ಲಿ ಒಂದು ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಲು ಕೇಳಿದರೆ ನಾನು ಸಮಯಾವಕಾಶ ನೋಡಿಕೊಂಡು ವಿಷಯದ ಗಂಭೀರತೆ ಬಗ್ಗೆ ತಮ್ಮ ಜೊತೆಗೆ ಚರ್ಚೆ ಮಾಡಿ ನಾನು ಪಟ್ಟಿ ಮಾಡಿಸುತ್ತೇನೆ. ಉಳಿದಂತೆ ಶೂನ್ಯ ವೇಳೆಯಲ್ಲಿ ಮಾತನಾಡಲು 20-20 ನಿಮಿಷ ಕಾಲಾವಾಕಾಶ ಕೊಡಿ ಎಂದು ಕೇಳುವಂಥದ್ದಕ್ಕೆ ನಾನು ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಶೂನ್ಯ ವೇಳೆಯನ್ನು ನಾಳೆ ಕೊನೆಗೆ ಇಟ್ಟುಕೊಳ್ಳುತ್ತೇನೆ. ಮತ್ತೆ ಶೂನ್ಯ ವೇಳೆಯಲ್ಲಿ ಎಲ್ಲರೂ ಚರ್ಚೆ ಮಾಡಬೇಕೆಂದು ಅಪೇಕ್ಷೆ ಪಡುವುದಾದರೆ ಶೂನ್ಯ ವೇಳೆಯನ್ನು ನಾಳೆಗೆ ಮುಕ್ತಾಯ ಮಾಡುತ್ತೇನೆ. ನಾಡಿದ್ದು ಶೂನ್ಯವೇಳೆ ಬೇಕಾಗುವುದಿಲ್ಲ. ಇನ್ನು ಮುಂದಕ್ಕೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಪದ್ಧತಿಯನ್ನು ಬಿಡೋಣ. ನಾಳೆ ಒಂದು ದಿವಸ ಪ್ರಯೋಗ ಮಾಡಿ ನೋಡೋಣ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು, ಸಂಬಂಧಿಸಿದವರು ಸರ್ಕಾರದ ಪರವಾಗಿ ಆ ವಿಷಯಕ್ಕೆ ಉತ್ತರ ಕೊಡತಕ್ಕಂಥದ್ದು, ಇಷ್ಟಕ್ಕೆ ನಾವು ಸೀಮಿತಗೊಳ್ಳುವುದಾದರೆ ಶೂನ್ಯವೇಳೆಯನ್ನು ಇಟ್ಟುಕೊಳ್ಳೋಣ. ಇಲ್ಲದಿದ್ದರೆ ಶೂನ್ಯವೇಳೆ ಅಗತ್ಯವಿಲ್ಲ ಇವತ್ತು 12-20 ಗಂಟೆಗೆ ಪ್ರಶ್ನೋತ್ತರ ವೇಳೆಯನ್ನು ಮುಗಿಸಿದ್ದೇವೆ. 12-20 ರಿಂದ ಈಗ 2 ಗಂಟೆ 10 ನಿಮಿಷ ಆಗುತ್ತಿದೆ. ಈಗಲೂ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಇದು ನನಗೆ ಯಾವುದೇ ರೀತಿಯ ಗೌರವವನ್ನು ತರತಕ್ಕಂಥದ್ದಲ್ಲ. ಮತ್ತು ಸಣ್ಣ ವಿಷಯವನ್ನು ಒಂದೇ ವಾಕ್ಯದಲ್ಲಿ ಹೇಳಬೇಕಾಗಿರತಕ್ಕಂಥದ್ದನ್ನು 25 ನಿಮಿಷ ಹರಿಕಥೆಯ ಹಾಗೆ ಹೇಳುತ್ತಾರೆ. ಇಲ್ಲ ಎಂದರೆ ನಾನು ನೇರವಾಗಿ ಸದಸ್ಯರ ಜೊತೆಗೆ ಘರ್ಷಣೆಗೆ ಇಳಿಯಬೇಕು, ಇಲ್ಲ ಎಂದರೆ, ನಾನು ಧ್ವನಿ ಏರಿಸಿ ಮಾತನಾಡಬೇಕು, ಅಥವಾ ಬೆಲ್ ಹಾಕಬೇಕು. ಇದು ಯಾವುದೂ ನನಗೆ ಇಷ್ಟ ಇಲ್ಲ. ನಗುನಗುತ್ತಾ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾನು ಸದನ ನಡೆಸಬೇಕೆಂದು ಬಹಳ ಪ್ರಯತ್ನ ಪಡುತ್ತೇನೆ. ಇದನ್ನು

ನನ್ನ ಅಸಹಾಯಕತೆಯೆಂದು ತಿಳಿದುಕೊಂಡಿದ್ದಾರೋ, ಅಥವಾ ನನಗೆ ರೂಲ್ಸ್ ಪರಿಚಯವಿಲ್ಲವೆಂದು ತಿಳಿದುಕೊಂಡಿದ್ದಾರೋ ಅಥವಾ ಮೃದುಸ್ವಭಾವ ಹೀಗೇ ಇದೆ ಅದರಿಂದ ಸವಾರಿ ಮಾಡಬಹುದೆಂದು ತಿಳಿದುಕೊಂಡಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ನನಗಂತೂ ಇವತ್ತು ಅಪಮಾನ ಆಗಿದೆ. 2 ಗಂಟೆಯ ಕಾಲ ನಾನು ಶೂನ್ಯವೇಳೆಯಲ್ಲಿ ಕಾರ್ಯಕ್ರಮ ನಡೆಸಿದ್ದೇನೆಂದರೆ, ಇದು ಯಾವ ಅಧ್ಯಕ್ಷರಿಗೂ ಕೂಡ ಗೌರವ ತರತಕ್ಕಂಥ ವಿಷಯ ಅಲ್ಲ. ದಯವಿಟ್ಟು ತಮ್ಮೆಲ್ಲರ ಸಹಕಾರವನ್ನು ಅಪೇಕ್ಷೆ ಪಡುತ್ತಿದ್ದೇನೆ. ಈಗ ಸಭೆಯನ್ನು ಮುಂದೂಡುತ್ತೇನೆ. ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಯಕ್ಕೆ ಸಭೆ ಸಮಾವೇಶಗೊಳ್ಳುವುದು.

(ಸಭೆಯನ್ನು ಮಧ್ಯಾಹ್ನ 2- 10ಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3- 15ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು 3.30 ಗಂಟೆಗೆ ಸಮಾವೇಶಗೊಂಡಿತು

(ಸಭಾಧ್ಯಕ್ಷರು ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ನಿಯಮ 60ರ ಮೇಲೆ ಚರ್ಚೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

(4) ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ವಿಷಯ: ರಾಜ್ಯದ ಕೃಷಿ ಮಾರುಕಟ್ಟೆ ಸಮಿತಿಯ ಆಡಳಿತ ಮಂಡಳಿಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ನಾಮನಿರ್ದೇಶನ ಸದಸ್ಯರಿಗೆ ಮತದನದ ಹಕ್ಕನ್ನು ನೀಡಿರುವುದರಿಂದ ಉಂಟಾಗಿರುವ ಪರಿಸ್ಥಿತಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರೂಲ್ 69ರ ಕೆಳಗೆ, ಕರ್ನಾಟಕ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಸಮಿತಿಗಳ ಚುನಾವಣೆಗಳು ಈಗಾಗಲೇ ನಡೆದಿದ್ದು ಇವುಗಳ ಆಡಳಿತ ಮಂಡಳಿಗೆ ಅಧ್ಯಕ್ಷರುಗಳನ್ನು ಚುನಾಯಿಸಲು ನಾಮ ನಿರ್ದೇಶನ ಮಾಡಿರತಕ್ಕಂಥ ಸದಸ್ಯರುಗಳಿಗೆ ಮತದಾನದ ಹಕ್ಕನ್ನು ನೀಡಿರುವುದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧಾಬಾಸ ಉಂಟಾಗಿದ್ದು ಈ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ತಮ್ಮಲ್ಲಿ ವಿನಂತಿಸಿಕೊಂಡ ಮೇರೆಗೆ ತಾವು ಅಪ್ಪಣೆ ಕೊಟ್ಟು ಚರ್ಚೆಗೆ ಮುಕ್ತ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತಮಗೆ ಈಗಾಗಲೇ ಸಾಕಷ್ಟು ಮಾಹಿತಿ ಮತ್ತು ತಿಳುವಳಿಕೆ ಕೂಡ ಇದೆ. ಈ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಗಳಿಗೆ ಏಪ್ರಿಲ್